International Journal of Kannada Research
www.kannadajournal.com

ISSN: 2454–5813
IJKR 2017; 3(4): 94-96
© 2017 IJKR
www.kannadajournal.com
Received: 18-08-2017
Accepted: 19-09-2017

**ರಜನಿ ಟಿ.ಎನ್**
ಸಂಶೋಧನಾ ವಿದ್ಯಾರ್ಥಿನಿ,
ತುಮಕೂರು ವಿಶ್ವವಿದ್ಯಾನಿಲಯ,
ಕನ್ನಡ ಅಧ್ಯಯನ ಕೇಂದ್ರ,
ತುಮಕೂರು

**ಡಾ॥ಶೀಲಾದೇವಿ ಎಸ್.ಮಳೀಮಠ**
ಸಹಾಯಕ ಪ್ರಾಧ್ಯಾಪಕರು, ಕನ್ನಡ
ವಿಭಾಗ ಬಿ.ಎಂ.ಎಸ್.ಮಹಿಳಾ
ಕಾಲೇಜು, ಬೆಂಗಳೂರು

**ಡಾ॥ ಪಿ.ಎಂ.ಗಂಗಾಧರಯ್ಯ**
ಸಹಾಯಕ ಪ್ರಾಧ್ಯಾಪಕರು, ಕನ್ನಡ
ವಿಭಾಗ ಕನ್ನಡ ಅಧ್ಯಯನ ಕೇಂದ್ರ,
ತುಮಕೂರು ವಿ.ವಿ.,ತುಮಕೂರು

**Correspondence**
**ರಜನಿ ಟಿ.ಎನ್**
ಸಂಶೋಧನಾ ವಿದ್ಯಾರ್ಥಿನಿ,
ತುಮಕೂರು ವಿಶ್ವವಿದ್ಯಾನಿಲಯ,
ಕನ್ನಡ ಅಧ್ಯಯನ ಕೇಂದ್ರ,
ತುಮಕೂರು

# ಪ್ರದರ್ಶನಾತ್ಮಕ ಕಲೆಗಳಲ್ಲಿ ಒಂದಾದ ಗೊರವರ ಕುಣಿತದ ಜನಪದ ಆರಾಧನೆಗಳು

**ರಜನಿ ಟಿ.ಎನ್, ಡಾ॥ಶೀಲಾದೇವಿ ಎಸ್.ಮಳೀಮಠ, ಡಾ॥ ಪಿ.ಎಂ.ಗಂಗಾಧರಯ್ಯ**

I am Pyrealy oral Cuttare every things is Folklore "ಒಂದು ಶುದ್ಧ ಮೌಖಿಕ ಸಂಸ್ಥೆಯಲ್ಲಿ ಎಲ್ಲವೂ ಜಾನಪದವಾಗಿದೆ" – ಬಿ. ಎ. ಬಾಟನ್
"ನಂಬಿಕೆಗಳು ರೂಪುಗೊಂಡಿದ್ದು ಧರ್ಮದ ಅಡಿಗಲ್ಲಿನಲ್ಲಿ ಧಾರ್ಮಿಕ ವಿಧಿವಿಧಾನಗಳೊಂದಿಗೆ ಹಾಸು ಹೊಕ್ಕಾಗಿ ರೂಪುಗೊಂಡಿರುವುದೇ ಜನಪದ ಆರಾಧನೆಚೂಗಿದೆ ".
ಆದಿ ಮಾನವನಿಗೆ ದೈವತ್ವದ ಬಗ್ಗೆ ಆರಾಧನಾ ಮನೋಭಾವ ಮೂಡಿದ್ದು ನಿಸರ್ಗದಲ್ಲಿನ ವಿವಿಧ ವಿದ್ಯಮಾನಗಳಿಂದ ಇರುವುದು ಎಂಬುದರ ಬಗ್ಗೆ ಚರ್ಚಿಸಲಾಗಿದೆ. ಅದೇ ರೀತಿ ಸಕಲ ಜೀವ ರಾಶಿಗಳ ಸೃಷ್ಟಿಗೆ ಮತ್ತು ಕಾರಣೀಭೂತವಾಗಿರುವ ಎಲ್ಲಾ ಆರಾಧನೆಗಳು ಬಹುಶಃ ಆದಿ ಮಾನವನನ್ನು ಬೆರೆಗುಗೊಳಿಸಬೇಕು. ಈ ಆರಾಧನೆಗಳನ್ನು ಧಾರಣಶಕ್ತಿಯ ಹಿಂದಿನ ಅಗೋಚರ ಶಕ್ತಿಗೆ ಮಾನವ ಶಕ್ತಿ ತಲೆ ಬಾಗಿಸಬೇಕಾಗಿದೆ. ಹಾಗಾಗಿ ಮಾನವಾತೀತ ಶಕ್ತಿಯನ್ನು ಬಿಟ್ಟಿ ದೈವಶಕ್ತಿಗೆ ಆರಾಧಿಸಿ ಒಲಿಸಿಕೊಳ್ಳಲು ಮಾನವ ಮುಂದಾದ. ಆದಿ ಮಾನವ ಸ್ಥಿತಿಯಲ್ಲಿ ಆರಂಭಗೊಂಡ ದೈವ ಆರಾಧನೆಯೂ ಇಂದಿನವರೆಗೂ ನಡೆದುಕೊಂಡು ಬಂದಿದೆ.

## ಗುರಿ ಮತ್ತು ಉದ್ದೇಶಗಳು

1. ಪ್ರದರ್ಶನ ಕಲೆಗಳಲ್ಲಿ ಒಂದಾದ ಗೊರವ ಕುಣಿತ ಸಾಮಾಜಿಕ ಚರಿತ್ರೆಯ ಬಗ್ಗೆ ಶೋಧಿಸುವುದು.
2. ಜನಪದ ಅಧ್ಯಯನದಲ್ಲಿ ಯಾವ ಯಾವ ಆರಾಧನೆಗಳಿವೆ ಎಂಬುದನ್ನು ಗುರ್ತಿಸುವುದು.
3. ಆರಾಧನೆಗಳ ಬಗ್ಗೆ ವಿವರಿಸುವುದು
4. ಪ್ರದರ್ಶನಾತ್ಮಕ ಕಲೆಯಾದ ಗೊರವರ ಕುಣಿತ ಆರಾಧನೆಗಳನ್ನು ಚರಿತ್ರೆಯ ಮೂಲಕ ಅನ್ವೇಶಿಸುವುದು.
5. ಗೊರವರ ಕುಣಿತ ಕ್ಷೇತ್ರಕಾರ್ಯದಲ್ಲಿ ಆರಾಧನೆಗಳನ್ನು ಶೋಧಿಸಿ ಅವರಿಗೆ ಮೌಖಿಕವಾಗಿ ಭೌತಿಕ ವಸ್ತುಗಳ ಬಗ್ಗೆ ಸಂಶೋಧಿಸುವುದು.

## ಸಂಶೋಧನಾ ವೈಧಾನಿಕತೆ

ಜನಪದ ಅಧ್ಯಯನದಲ್ಲಿ ಜನಪದ ಜೀವನದಲ್ಲಿ ಕಲೆಗಳ ಸಾರ್ವತ್ರಿಕ ಸ್ವರೂಪವನ್ನೂ ಪಡೆದುಕೊಂಡು ಕಲಾವಿದರಲ್ಲಿ ಪರಸ್ಪರ ಸಹಕಾರ ಮನೋಭಾವನೆಯನ್ನು ವರ್ಧಿಸುವಲ್ಲಿ ಸಹಾಯಕವಾಗುತ್ತದೆ. ಜನಪದ ಕಲೆಗಳು ನಮ್ಮ ರಾಷ್ಟ್ರೀಯ ಪ್ರಜ್ಞೆಯನ್ನು ಕುದುರಿಸುವ ಸಾಧನವಾಗಿಯೂ ಬಳಸಿಕೊಳ್ಳಬಹುದು. ಹಾಗೂ ಮೌಖಿಕ ಮತ್ತು ಭೌತಿಕ ವಸ್ತುಗಳ ಸಾಮಾಜಿಕ ಚರಿತ್ರೆಯನ್ನು ಶೋಧಕರಣಕ್ಕಾಗಿ ಮತ್ತು ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೆಲವು ಕ್ಷೇತ್ರಕಾರ್ಯಗಳ ಮೂಲಕ ಅನ್ವೇಷಿಸುವುದಕ್ಕಾಗಿ ನಾನು ಪ್ರಾಯೋಗಿಕ ವಿಧಾನವನ್ನು ಕೈಗೊಂಡಿರುತ್ತೇನೆ.

## ಅಧ್ಯಯನದ ಪ್ರಸ್ತುತತೆ

ಜನಪದ ಇಂದು ನೆನ್ನೆಯದಲ್ಲ ಇದಕ್ಕೆ ಪುರಾತನ ಕಾಲದಷ್ಟು ಇತಿಹಾಸವಿದೆ. ಇದು ಜನರಿಗೆ ಸಂಬಂಧಿಸಿದ್ದು ಜನಪದ. ಮನುಷ್ಯ ಭೂಮಿಯ ಮೇಲೆ ಉಗಮವಾಗಿ ವಿಕಾಸದ ಹಾದಿಯಲ್ಲಿ ಪ್ರಜ್ಞಾವಂತನಾದಂತೆಲ್ಲ ತನ್ನ ಬದುಕಿನ ಬಗೆಗೆ ಆಲೋಚನಪರನಾಗಿ ರೂಢಿಸಿಕೊಂಡ ಅಂಶಗಳೆಲ್ಲವೂ ಜನಪದ ಸಂಸ್ಕೃತಿ ಎಂದೆನಿಸುತ್ತದೆ. ಆಂಗ್ಲ ಪದದಲ್ಲಿ "Folklore" ಎಂಬುದಾಗಿದೆ.

ಅಂದರೆ ಪ್ರಾಚೀನ ಕಾಲದ ಸಂಪ್ರದಾಯಬದ್ದ ಸಂಸ್ಕೃತಿಯ ಅಮೂಲ್ಯ ಅಂಶಗಳನ್ನು ಅರ್ಥಪೂರ್ಣವಾಗಿ ಗರ್ಭೀಕರಿಸಿಕೊಂಡಿರುವಂತದ್ದು ಜನಪದವಾಗಿದೆ. ಇದೇ ರೀತಿಯಲ್ಲಿ ಕಂಡುಬರುವ ಮನುಕುಲದ ಮೊದಲ ಇತಿಹಾಸವೇ ಜನಪದ.

ಮನುಷ್ಯನ ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿ ತಲೆ–ತಲೆಮಾರುಗಳಿಂದ ಬಂದಿರುವ ಮೌಖಿಕ ಪರಂಪರೆಯಲ್ಲಿ ಸಂಬಂಧ ಜ್ಞಾನವೇ ಜಾನಪದ. ಜನರಿಗೆ ಸಂಬಂಧಪಟ್ಟ ವಸ್ತು ವಿಷಯಳೆಲ್ಲವೂ ಜಾನಪದವಾಗಿ ಪರಿಣಮಿಸುತ್ತದೆ.

"ಜಾನಪದ ಲಿಖಿತ ದಾಖಲೆಗಳಿಗಿಂತ ಅಲಿಖಿತ ದಾಖಲೆಗೆ ಅಥವಾ ಮೌಖಿಕ ಪರಂಪರೆಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತದೆ" –ಸ್ಮಿತ್ ಥಾಮಸ್

"ಶುದ್ಧ ಮೌಖಿಕ ಸಂಸ್ಕೃತಿಯಲ್ಲಿ ಪ್ರತಿಯೊಂದು ಜಾನಪದವೇ ಎಂದಿದ್ದಾರೆ " – ಬಿ.ಎ. ಬಾಟ್ಕಿನ್

"ಮೌಖಿಕ ಸಂಪ್ರದಾಯದಲ್ಲಿ ಸಾಗಿ ಬಂದ ಯಾವುದೇ ಪರಂಪರಾನುಗತ ವಿಷಯವಾಗಿರಲಿ ಸಾಂಪ್ರದಾಯಿಕ ಗದ್ಯ, ಪದ್ಯವಾಗಿರಲಿ ಅದು ಜಾನಪದ ಎಂದಿದ್ದಾರೆ " – ಇ.ಡಬ್ಲೂ. ವೊಯ್ಗ್‌ಲಿನ್

"ಜಾನಪದ ಮೌಖಿಕವಾಗಿ ಅಥವಾ ಸಾಂಪ್ರದಾಯಿಕ ನಿದರ್ಶಗಳ ಮೂಲಕ ವಿಭಿನ್ನ ರೂಪಗಳಲ್ಲಿ ಯಾವುದೇ ಸದಸ್ಯರಲ್ಲಿ ಪರಂಪರಾನುಗತವಾಗಿ ಪರಿಚಲನೆಗೊಳ್ಳುವ ಸಂಸ್ಕೃತಿ ವಿಷಯಗಳನ್ನು ಒಳಗೊಳ್ಳುತ್ತದೆ "– ಜಿ.ಹೆಚ್.ಬ್ರುನ್ ವ್ಯಾಂಡ್

**ಅಧ್ಯಯನದ ಅರ್ಥೈಸುವಿಕೆ**

ಜಾನಪದದ ಜಗತ್ತು ತುಂಬಾ ವಿಶಾಲವಾದುದು. ಮೌಖಿಕ ಸಾಹಿತ್ಯ, ಭೌತಿಕ ಸಂಸ್ಕೃತಿ, ಸಾಮಾಜಿಕ ಜಾನಪದ ಸಂಪ್ರದಾಯಗಳು, ಪ್ರದರ್ಶನಾತ್ಮಕ ಜನಪದ ಕಲೆಗಳು ಎಲ್ಲವೂ ಜಾನಪದಕ್ಕೆ ಅನ್ವಯವಾಗುತ್ತದೆ. ಜನಪದ ಹಾಡು–ಕುಣಿತಗಳ ಜಲಮೂಲ ನಮ್ಮ ಅನಕ್ಷರಸ್ಥ ಗ್ರಾಮೀಣರ ಅಂತರಂಗ. ಅದು ಬೆಳೆದುದು ಲೋಕಕ್ಕೆ ಅನ್ನವನ್ನು ದೊರಕಿಸುವ ರೈತರ ಅಂಗಳದಲ್ಲಿ ನಮ್ಮ ಜನಪದ ಬದುಕಿಗೆ ಹುಟ್ಟಿದ ಪರಿಸರವೇ ಶಾಲೆ, ಪಟ್ಟ ಅನುಭವವೇ ಮೊದಲಿನಿಂದಲೂ ಆರಾಧಿಸಿಕೊಂಡು ಬಂದಿದ್ದಾರೆ. ಈ ಆರಾಧನೆಗಳು ಹೆಚ್ಚು ದೈವಸಂಕಲ್ಪದಲ್ಲಿ ಬರುವಂತದ್ದು.

ಈ ದೈವ ಆರಾಧನೆಯು ಪರಂಪರಾನುಗತದಿಂದ ಬಂದಿವೆ ಅದರಲ್ಲಿ ಹೆಚ್ಚು ಪ್ರದರ್ಶನ ಕಲೆಗಳಲ್ಲಿ ಕಂಡುಬಂದಿವೆ ಅದರಲ್ಲಿ ಒಂದನ್ನು ಜನಪದ ಆರಾಧನೆಯಲ್ಲಿ ಯಾವ ರೀತಿಯಾಗಿ ದೈವತ್ವದ ಆರಾಧನೆಯಲ್ಲಿ ತೊಡಗಿದೆ ಮತ್ತು ಅದರ ಚರಿತ್ರೆ, ಸ್ವರೂಪ, ಹೇಗೆ ಇರುವುದೆಂಬುದನ್ನು ಚರ್ಚಿಸಲಾಗಿದೆ.

ಪ್ರದರ್ಶನಾತ್ಮಕ ಕಲೆಗಳಲ್ಲಿ ಒಂದಾದ ಗೊರವರ ಕುಣಿತವು ಒಂದು ಪ್ರಮುಖವಾಗಿರುವಂತದ್ದು. ಈ ಕುಣಿತವು ತಲಾತಲಾಂತರಾದಿಂದ ಆರಾಧನೆಯಿಂದ ಬಂದಿರುವಂತದ್ದು ಇದು ಗೀತ ಮತ್ತು ನೃತ್ಯ ಪ್ರಧಾನ ಆರಾಧನಾ ಕಲೆಗಳಾಗಿವೆ.

**ಜನಪದ ಆರಾಧನೆಗಳು**

ಪ್ರಕೃತಿಯ ವಿಕೋಪ, ರೋಗರುಜಿನಗಳು ಇವಕ್ಕೆಲ್ಲ ಒಂದು ಅದ್ಭುತ ಶಕ್ತಿಯೇ ಕಾರಣ ಎಂದು ನಮ್ಮ ಜನಪದರು ಭಾವಿಸಿದ್ದರು. ತಾವು ಸುಖ ಜೀವನ ನಡೆಸಲು ಈ ಶಕ್ತಿಗಳಿಗೆ ಅಂದರೆ ದೈವ ಶಕ್ತಿಗೆ ಹೋಗಬೇಕಾಗುವುದು ಅನಿವಾರ್ಯವೆಂಬುದು ಅವರ ನಂಬಿಕೆ. ಅಗೋಚರ ದೈವಶಕ್ತಿಗಳಿಗೆ ಅವುಗಳ ಪೀಳಿಗೆಯಿಂದ ಮಾನವ ಆರಾಧನೆ ನಡೆಸುತ್ತಾ ಬಂದಿದ್ದಾನೆ. ಮನುಷ್ಯ ಎಲ್ಲಾ ಸಾಹಿತ್ಯ ಕಲೆಗಳಿಗೆ ಮೂಲ ದೇವರ ಕಲ್ಪನೆಯಾಗಿತ್ತು. ಕುಲದೇವತೆ, ಗ್ರಾಮ ದೇವತೆ, ಕೃಷಿದೇವತೆ– ಇಂತಹವುಗಳನ್ನು ತೃಪ್ತಿಪಡಿಸುವುದೇ ಅವರ ಗುರಿಯಾಯಿತು. ದೇವರು ಶಕ್ತಿಶಾಲಿ ಎಂದು ಧೃಡವಾಗಿ ನಂಬಿದ ಮಾನವ ಆ ಶಕ್ತಿಯನ್ನು ಪೂಜಿಸುವಾಗ ಹೃದಯ ತುಂಬಿ ಹಾಡತೊಡಗಿದ, ಮಾನವ ದೈವ ಮುಂದೆ ಹಾಡಿ ನಲಿದದ್ದು ನೃತ್ಯಗಳಿಗೆ ಮೂಲವಾಯಿತು.

**ಉದಾ:–** ಯಕ್ಷಗಾನ, ವೀರಗಾಸೆ, ವೀರಭದ್ರಕುಣಿತ, ಗೊರವರಕುಣಿತ ಹೀಗೆ ಮುಂತಾದ ಜನಪದ ಕಲೆಗಳಿಂದ ಜಾಗತೀಕರಣವಿದ್ದರೂ ಹೆಚ್ಚು ಪ್ರಚಲಿತಗೊಳ್ಳಲು ಪ್ರಾಮುಖ್ಯತೆ ಪಡೆದಿದೆ. ಈ ಜನಪದ ಕಲೆಯನ್ನೇ ವಿದೇಶಿ ಜನಾಂಗಕ್ಕೆ ಹೆಚ್ಚು ಆಸಕ್ತಿಯಿಂದ ಕಲಿಯುವ ಆತುರತೆ ಉಂಟಾಗಿದೆ. ಇದರಿಂದ ಜನಪದ ಪ್ರದರ್ಶನ ಕಲೆಗಳು ಹೆಚ್ಚು ಬೆಳವಣಿಗೆಯನ್ನು ಸಾಧಿಸಿವೆ. ಜಾಗತೀಕರಣ ಸಂದರ್ಭದಲ್ಲೂ ಅದರ ಕ್ರಿಯಾತ್ಮಕತೆ, ಚಟುವಟಿಕೆಗಳಿಂದಾಗಿ ಇದು ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿದೆ. ದೈವದ ಆರಾಧನೆ ನಮ್ಮ ಜನಪದರ ಬದುಕಿಗೆ ಒಂದು ಅರ್ಥ ತಂದಿದೆ. ತಾವು ನಂಬಿದ ದೈವದ ದೈವವನ್ನು ತೃಪ್ತಿ ಪಡಿಸಲು ಹಾಡು ಕುಣಿತಗಳೊಂದಿಗೆ ವಿಶಿಷ್ಟ ವೇಷ ಭೂಷಣಗಳನ್ನು ತೊಡಲಾರಂಬಿಸದರು. ತಾವು ನಡೆಸುವ ಆರಾಧನೆ ಒಂದು ಕಥಾ ರೂಪವನ್ನು ಅಥವಾ ಪವಾಡದ ರೂಪವನ್ನು ನೀಡಿರುವುದು ಕಂಡು ಬರುತ್ತದೆ. ನಂಬಿದ ದೈವಕ್ಕೆ ಹರಕೆ ಹೊತ್ತು ಕೊಳ್ಳುವುದು ಆ ಹರಕೆ ನೆರವೇರಿದಾಗ ಬಗೆಬಗೆಯ ಸೇವೆ ಸಲ್ಲಿಸುವುದು ನಡೆದು ಬಂದ ಆಚರಣೆಯಾಗಿದೆ.

ಕರ್ನಾಟಕದಲ್ಲಿ ಹಲವಾರು ಜನಪದ ಕಲೆಗಳು ಆರಾಧನಾ ಪ್ರಧಾನ ಕಲೆಗಳೇ ಆಗಿವೆ. ಅವು ಪ್ರದರ್ಶನಾತ್ಮಕ ಕಲೆಗಳಾಗಿ ರೂಪುಗೊಂಡಿದೆ. ಹೀಗೆ ರೂಪುಗೊಂಡಿದ್ದ ಕಾರಣ ಜನಪದರ ಮನೋರಂಜನೆ ಪ್ರತಿಯೊಂದು ಆರಾಧನಾ ಸಂಪ್ರದಾಯದಲ್ಲೂ ಗೀತ, ನೃತ್ಯ ಸಂಪ್ರದಾಯಗಳು, ಸಂಗೀತಗಳು ಪೂರಕ ಎನಿಸಿವೆ. ನಮ್ಮ ಜನಪದ ಕಲಾ ಅಭಿಜ್ಞತೆಯನ್ನು ಅಭಿವ್ಯಕ್ತಿಸುತ್ತದೆ. ಆರಾಧನಾ ಕಾಲದಲ್ಲಿ ತೊಡುವ ವೇಷಭೂಷಣಗಳು ಬಹುಶಃ ಇತರರಿಂದ ತಾವು ಪ್ರತ್ಯೇಕವಾಗಿ ಕಾಣಲು ಅವರು ಆರಾಧನೆಗೆಂದೇ ವಿಶಿಷ್ಟವಾಗಿದೆ. ಇದರಲ್ಲಿ ಕಲಾವಿದರು ವರ್ಣಮಯ ಉಡುಪುಗಳನ್ನು ಬಳಸುತ್ತಿರಬೇಕು. ಕರ್ನಾಟಕದ ಆರಾಧನಾ ಕಲೆಗಳಲ್ಲಿ ಒಂದಕ್ಕೊಂದು ಒಂದೊಂದು ವೈಶಿಷ್ಟ್ಯವಿದೆ. ಇಂತಹ ವಿಶಿಷ್ಟ ವೇಷ ಭೂಷಣಗಳನ್ನು ಆರಾಧನಾ ಕಲೆಗಳು ಅದರ ಕಲಾತ್ಮಕತೆಯನ್ನು ಮಾತ್ರ ಗಮನದಲ್ಲಿರಿಸಿಕೊಂಡು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

**ಜನಪದ ಆರಾಧನೆಗಳಲ್ಲಿ ಹಲವಾರು ಪ್ರಕಾರಗಳಿವೆ.**

1.ಮಾರಿಯಆರಾಧನೆ 2.ಭೂತಾರಾಧೆನೆ 3.ನಾಗಾರಾಧೆನೆ 4.ವೀರಭದ್ರನಆರಾಧನೆ 5.ಯಲ್ಲಮ್ಮನಆರಾಧನೆ 6.ಮೈಲಾರಲಿಂಗನ ಆರಾಧನೆ 7.ಮಂಟೇಸ್ವಾಮಿ ಆರಾಧನೆ 8.ಮೊಹರಂ ಆರಾಧನೆ ಹೀಗೆ ಇನ್ನೂ ಹಲವಾರು ಇತರೆ ಜನಪದ ಆರಾಧನೆಗಳಿವೆ.

ಕರ್ನಾಟಕದಲ್ಲಿ ಆರಾಧನಾ ಪ್ರಧಾನ ಕಲೆಗಳಲ್ಲಿ ಹಲವು ಆರಾಧನಾ ಕಲೆಗಳಿವೆ. ಅವುಗಳಲ್ಲಿ ಗೊರವರ ಕುಣಿತವನ್ನು ಈ ಲೇಖನದಲ್ಲಿ ಭೌತಿಕ ವಸ್ತುಗಳು ಮತ್ತು ಮೌಖಿಕ ಕಥನದ ಚರಿತ್ರೆಯನ್ನು ವಿವರಿಸಲಾಗಿದೆ. ಜನಪದ ಕಲೆಗಳಲ್ಲಿ ಆರಾಧನೆಗಳೊಂದಿಗೆ ಕಂಡುಬರುವ ಕುಣಿತಗಳೇ ಪ್ರಧಾನವಾಗಿದೆ. ಸಂಕೀರ್ಣ ಕಲೆಗಳು, ರಂಗಭೂಮಿ ಕಲೆ ಇತರ ಜನಪದ ಕಲೆಗಳು ಆರಾಧನೆಗಳಲ್ಲಿವೆ ಮಾರಿಯ ಆರಾಧನೆ, ವೀರಭದ್ರನ ಆರಾಧನೆ, ಯಲ್ಲಮ್ಮನ ಆರಾಧನೆ, ಮೈಲಾರ ಲಿಂಗನ ಆರಾಧನೆ ಹೀಗೆ ಹಲವಾರು ಆರಾಧನೆಗಳು ಮುಖ್ಯವಾಗಿದೆ.

**ಗೊರವರ ಕುಣಿತದ ಜನಪದ ಆರಾಧನೆ**

ಜನಪದ ಪ್ರದರ್ಶನಾತ್ಮಕ ಕಲೆಗಳಲ್ಲಿ ಗೊರವರ ಕುಣಿತವು ಒಂದು ಪ್ರಮುಖವಾದದ್ದು. ಗೊರವರು ಮೈಲಾರಲಿಂಗನ ಭಕ್ತರು. ಗೊರವರ ಪ್ರಾಚೀನತೆಯನ್ನು 400 ವರ್ಷಗಳಿಗೂ ಹಿಂದಕ್ಕೆಳೆಯಲಾಗಿದೆ. ಗೊರವರ ಕುರಿತು ಮಧುರಕವಿ ಮತ್ತು ಈ ಶಬ್ದ ನಯಸೇನನಲ್ಲೇ ಬಳಕೆಯಾಗಿದೆ.ಗೊರವ ಎಂಬ ಶಬ್ದ 'ಗುರುವಿನ ಅಪಭ್ರಂಶ' ರೂಪಕವಾಗಿರಬಹುದು ಗೊರವರನ್ನು ಗೊಗ್ಗ, ಗಡಬಡ್ಡ್ಯ, ಗೊಗಯ್ಯ, ಕಡುಬಡ್ಡೋರು ಎಂದು ಮುಂತಾಗಿ ಕರೆಯುತ್ತಾರೆ.

ಗೊರವರಲ್ಲಿ ಮೈಲಾರಲಿಂಗನಿಗೆ ತಮ್ಮನ್ನು ತಾವು ಅರ್ಪಿಸಿಕೊಳ್ಳುತ್ತಾರೆ. ಮೈಲಾರಲಿಂಗನಿಗೆ ದೀಕ್ಷೆ ಪಡೆದಿರುತ್ತಾರೆ. ಮತ್ತು ಆರಾಧ್ಯದೈವವೂ ಕೂಡವಾಗಿರುತ್ತದೆ. ಮೈಲಾರ ಲಿಂಗನೂ ಶಿವನ ಒಂದು ಅವತಾರವಾಗಿದೆ. ಅವರು ಈ ರೀತಿ ಅರ್ಪಿಸಿ ಕೊಳ್ಳುವುದಕ್ಕೆ "ಹೊರಹರುವುದು" ಅಥವಾ "ದೇವರನ್ನು ಹೊರುವುದು" ಎಂದು ಹೇಳಲಾಗಿದೆ. ಹೊರೆಹೊರವುದು ಗೊರವರಿಗೆ ವಂಶಪಾರಂಪರ್ಯವಾಗಿ ಬಂದಿರುತ್ತದೆ. ಹರಕೆಗಳನ್ನು ಹೊರೆಯುವುದು ಗೊರವಪ್ಪನ ಬಹುಮುಖ್ಯವಾಗಿದೆ.

ಗೊರವರು ಮ್ಯಲಾರಲಿಂಗನ ದೀಕ್ಷೆ ತೊಡಗಿದ ನಂತರ ಗೊರವರ ಮನೆಯ ಹಿರಿಯ ಮಗನಿಗೆ ಗೊರವಯ್ಯನ ದೀಕ್ಷೆಯಾಗುತ್ತದೆ. ಅಂದಿನಿಂದ ಅವನ ಕಾಲಿಗೆ ಚಪ್ಪಲಿ ಹಾಕುವಂತಿಲ್ಲ. ಪೋಷಕರನ್ನು ದೂಷಿಸುವಂತಿಲ್ಲ. ಹಾವನ್ನು ಹೊಡೆಯುವಂತಿಲ್ಲ, ಆತ ಮೈಲಾರಲಿಂಗನ ಹೆಸರಿನಲ್ಲಿ ಕ್ವಾರುಣ್ಯ ಮಾಡಬೇಕು. ಗೊರವರು ತಲೆಯ ಮೇಲೆ ಕರಡಿ ಕೂದಲಿನ ಕುಲಾವಿ, ಕರಿಯ ಕಂಬಳದ ನಿಲುವಂಗಿ, ಎದೆಗೆ ಅಡ್ಡಲಾಗಿ ಕವಡೆ ಸರಗಳ ಪಟ್ಟಿ, ಹೆಗಲಲ್ಲಿ ಜೋಳಿಗೆ, ದೋಣಿ, ಭಂಡಾರ, ಚೀಲ, ಗಂಟೆ, ತ್ರಿಶೂಲ, ನಾಗಬೆತ್ತ, ಬಲಗೈಯಲ್ಲಿ ಡಮರುಗ, ಎಡಗೈಯಲ್ಲಿ ಪಿಳ್ಳಂಗೋವಿ, ಹಣೆಯಲ್ಲಿ ವಿಭೂತಿ ಮತ್ತು ಕುಂಕುಮ ಮತ್ತು ಕಣ್ಣಿನ ಸುತ್ತ ವಿಭೂತಿಯ ಲೇಪನ ಇವುಗಲ್ಲಾ ಗೊರವರ ವೇಷಭೂಷಣವಾಗಿದೆ.

ಗೊರವರು 'ಮಡಿ'ಯವರು, ಅವರು ದಿನನಿತ್ಯ ತಪ್ಪದೆ 2ಹೊತ್ತು ಸ್ನಾನ ಮಾಡಿ, 3 ಹೊತ್ತು ಪೂಜೆ ಮಾಡಬೇಕು ತಾವೇ ಅಡುಗೆ ಮಾಡಿ ದೇವರಿಗೆ ನೈವೇದ್ಯ ಅರ್ಪಿಸಬೇಕು. ಗೊರವರು ಹಲವಾರು ಕಥೆಗಳ ಮೂಲಕ ತಮ್ಮ ಗೀತೆ, ನೃತ್ಯದ ಮೂಲಕ ಕುಣಿಯುವರು. 'ಮುಡುಕುತೊರೆ', 'ಮಲ್ಲಪ್ಪನ ಕಾವ್ಯ', 'ಮೈಲಾರ ಲಿಂಗನ ಕಥೆ', 'ಗಂಗೆ ಗೌರಿ ಜಗಳದ ವೃತ್ತಾಂತವೇ ಆಗಿದೆ. ಮಲ್ಲಿಕಾರ್ಜುನ ಸಂಸಾರದ ಕಥೆಯನ್ನಾಗಿ ಪರಿವರ್ತಿಸಿಕೊಂಡಿರುವುದು ವಿಶಿಷ್ಟವಾಗಿದೆ. ಗೊರವರು ತಮ್ಮ ದೈವ ಜಾತ್ರೆಗಳಲ್ಲಿ ಹಬ್ಬ–ಹರಿದಿನಗಳಲ್ಲಿ ತಮ್ಮ ಸರ್ವ ಅಲಂಕಾರಗಳೊಡನೆ ಸಾಮೂಹಿಕವಾಗಿ ನೃತ್ಯ ಮಾಡುವ ದೃಶ್ಯವನ್ನು ನೋಡಿಯೇ ಅನುಭವಿಸಬೇಕು.

ನಾನು ಸ್ವಯಂ ಪ್ರತ್ಯಕ್ಷವಾಗಿ ಕ್ಷೇತ್ರಕಾರ್ಯದ ಮೂಲಕ ಗೊರವರ ಕುಣಿತವನ್ನು ವೀಕ್ಷಿಸಿ, ಮಾಹಿತಿ ಪಡೆದುಕೊಂಡು ವಿವರಿಸಲಾಗಿದೆ. ಕಥೆ ಮಾಡುವಲ್ಲಿ ಪ್ರಧಾನ ಗಾಯಕ ಹಾಡುತ್ತಿದ್ದರೆ, ಉಳಿದವರು ವಾದ್ಯ ನುಡಿಸುತ್ತಾ ಸೊಲ್ಲು(ಸಾತ್) ಕೊಡುವುದರ ಮೂಲಕ ಕಥೆ ವಿವರಿಸುತ್ತಾರೆ.

ಗೀತಾರಾಧನೆ ಮತ್ತು ನೃತ್ಯಾರಾಧನೆಯು ಕೂಡ ಗೊರವರಕುಣಿತದವರದು ಆಗಿರುತ್ತದೆ. ಗೊರವರು ಮಣೇವು ಸೇವೆಯನ್ನು ಆಚರಿಸುತ್ತಾರೆ. ಈ ಮೇಣೇವು ಸೇವೆಗೆ ಗೊರವರನ್ನು ಆಹ್ವಾನಿಸುತ್ತಾರೆ. ಡಮರುಗ ಹಿಡಿದು ಕಂಬಳಿಯ ಸುತ್ತ ಲಯ ಬದ್ದವಾಗಿ ಕುಣಿಯುತ್ತಾರೆ. ಮೈಲಾರ ಲಿಂಗ ಮಹಿಮೆಗಳನ್ನು ಹಾಡುತ್ತಾ ಕುಣಿಯುತ್ತಾರೆ.

**ಮುಕ್ತಾಯ**

ಈ ಗೊರವರ ಕುಣಿತವನ್ನು ಕ್ಷೇತ್ರಕಾರ್ಯದಲ್ಲಿ ತೊಡಗಿದಾಗ ಅವರ ಮೌಖಿಕ ಕಥನ ಮತ್ತು ಭೌತಿಕ ವಸ್ತುಗಳ ಮೂಲಕ ಅವರ ದೈವ ಆರಾಧನೆಗಳನ್ನು ಹೇಗೆ ಅನುಸರಿಸವರು. ಒಟ್ಟಿನಲ್ಲಿ ಗೊರವರ ಕುಣಿತದ ಆರಾಧನೆಯನ್ನು ಚರಿತ್ರೆ ಮತ್ತು ಭೌತಿಕ ವಸ್ತುಗಳ ಬಗ್ಗೆ ಇರು ದೈವ ಶಕ್ತಿಗೆ ಮಾನವ ನಂಬಿಕೊಂಡು ಬಂದಿರುವುದು ಯಾವ ಕಥಾನಮೂಲಕ ಗೊರವರ ಪ್ರದರ್ಶನಾತ್ಮಕ ಕಲೆಗಳಲ್ಲಿ ಜನಪದ ಆರಾಧನೆಯು ಹೆಚ್ಚು ಪ್ರಮುಖವಾಗಿದೆ ಇದರ ಮಿತಿ ವಿವರಣೆಯನ್ನು ಈ ಮೂಲಕ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

**ತೀರ್ಮಾನಗಳು**

1. ಮಾನವ ಅಂದಿನಿಂದಲೂ ನಡೆದು ಬಂದಿರುವ ದೈವ ಶಕ್ತಿಯನ್ನು ಇಂದಿಗೂ ಆರಾಧನೆಯನ್ನು ಆಚರಿಸುತ್ತಿದ್ದಾರೆ.
2. ಯಾವ ಯಾವ ಜನಪದ ಆರಾಧನೆಗಳಿವೆ ಮತ್ತು ಗೊರವರ ಕುಣಿತದಲ್ಲಿ ಗೀತ ಪ್ರಧಾನ ಆರಾಧನೆಗಳಿವೆ ಮತ್ತು ನೃತ್ಯ ಪ್ರಧಾನ ಆರಾಧನೆಗಳಿವೆ ಎಂಬುದು ತಿಳಿಯಲಾಗಿದೆ.
3. ಕ್ಷೇತ್ರಕಾರ್ಯದ ಮೂಲಕ ಗೊರವರ ಕುಣಿತದ ಬಗ್ಗೆ ವಿವರಣೆ ಮಾಹಿತಿ ಪಡೆದು ವಿವರಿಸಲಾಗಿದೆ.
4. ಕಲಾವಿಧರ ಭೌತಿಕ ವಸ್ತುಗಳ ಸಾಮಾಜಿಕ ಚರಿತ್ರೆಯನ್ನು ತಿಳಿಯಲಾಗಿದೆ.
5. ಜನಪದ ಆರಾಧನೆಯಲ್ಲಿ ತೊಡಗಿದಾಗ ಅವರ ಕಲಾತ್ಮಕತೆ ಮತ್ತು ಕಲಾ ಅಭಿಜ್ಞತೆಯನ್ನು ಅಭಿವ್ಯಕ್ತಿಸಿದ್ದಾರೆ.
6. ಜಾನಪದ ಅನ್ವಯಿಕತೆ : (ಸಂ) ಡಾ॥ ರಂಗಾರೆಡ್ಡಿ ಕೋಡಿರಾಂಪುರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ : 2003.
7. ಶಕ್ತಿದೇವತೆಗಳು : ಕಂಟಲಗೆರೆ ಸಣ್ಣ ಹೊನ್ನಯ್ಯ : ತುಮಕೂರು.ವಿ.ವಿ ಪ್ರಸಾರಂಗ : 2011
8. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ : (ಸಂ) ಚಿ.ಸಿ. ನಿಂಗಣ್ಣ : ಸಿದ್ದಲಿಂಗೇಶ್ವರ ಪ್ರಕಾಶನ : ಗುಲಾಬರ್ಗ : 2015
9. ಜನಪದ ಕಲಾ ಪ್ರವೇಶ : ಡಾ॥ ಚಕ್ಕೆರೆ ಶಿವಶಂಕರ್ : ಸಾಗರ ಪ್ರಕಾಶನ : ಬೆಂಗಳೂರು : 2012
10. ಕ್ಷೇತ್ರಕಾರ್ಯ : ತುಮಕೂರು ಜಿಲ್ಲೆಯಲ್ಲಿನ ಕ್ಷೇತ್ರಕಾರ್ಯ.